ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-2, September-October 2025, Pp. 8-14
©*IIMRD*, Mysuru
IIMRD JOURNALS
www.iimrd.com

# ರಾಷ್ಟ್ರಕೂಟರ ಕಲೆಯಲ್ಲಿ ಮಕರ ತೋರಣ

**ಡಾ.ಎಲ್.ಪಿ.ಮಾರುತಿ**
ಪ್ರಾಧ್ಯಾಪಕರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಸಾರಾಂಶ: (Abstract)**

*ಕರ್ನಾಟಕದಲ್ಲಿ ಬಾದಾಮಿ ಚಾಲುಕ್ಯರ ನಂತರ ಆಳ್ವಿಕೆ ಮಾಡಿದ ರಾಷ್ಟ್ರಕೂಟರು ಸುಮಾರು ಎರಡು ಶತಮಾನಗಳ ಕಾಲ 8ನೇ ಶತಮಾನದಿಂದ 10ನೇ ಶತಮಾನದವರೆಗೂ ಆಳ್ವಿಕೆ ನಡೆಸಿದರು. ಕಲೆ ಮತ್ತು ವಾಸ್ತುಶಿಲ್ಪದ ದೃಷ್ಟಿಯಿಂದ ರಾಷ್ಟ್ರಕೂಟರು ಚಾಲುಕ್ಯರ ಶೈಲಿಗಳನ್ನೇ ಹಿಂಬಾಲಿಸಿದರು ಎಂಬ ಬಹುತೇಕ ಕಲಾ ಚರಿತ್ರೆಕಾರರ ಅಭಿಮತವಾಗಿದೆ. ಆದರೆ ಇತ್ತೀಚಿನ ಸ್ಥಳೀಯ ಅಧ್ಯಯನಗಳು ಈ ವಾದವನ್ನು ಅಲ್ಲಗಳೆಯುತ್ತವೆ. ಕರ್ನಾಟಕದ ಸುಮಾರು 200ಕ್ಕೂ ಹೆಚ್ಚು ಸ್ಥಳಗಳಲ್ಲಿ ರಾಷ್ಟ್ರಕೂಟರು ದೇವಾಲಯ, ಬಸದಿ ಎಂಬ ಧಾರ್ಮಿಕ ವಾಸ್ತುಶಿಲ್ಪದ ಜೊತೆಗೆ ನಾಗರಿಕ ವಾಸ್ತುಶಿಲ್ಪವನ್ನು ನಿರ್ಮಿಸಿದ್ದರು ಎನ್ನಲು ಪುರಾತತ್ವೀಯ ಮತ್ತು ಸಾಹಿತ್ಯಿಕ ಆಕರಗಳು ದೊರಕಿವೆ. ದೇವಾಲಯ ವಾಸ್ತುಶಿಲ್ಪದಲ್ಲಿ ಅಲಂಕಾರಿಕ ಭಾಗಗಳಲ್ಲಿ ಒಂದಾದ ಮಕರ ತೋರಣವು ರಾಷ್ಟ್ರಕೂಟರ ದೇವಾಲಯಗಳಲ್ಲಿ ಯಾವ ರೀತಿ ಬಿಂಬಿತವಾಗಿತ್ತು ಎನ್ನುವುದರ ಕುರಿತು ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ.*

**ಮುಖ್ಯಪದಗಳು (Keywords):** ಕರ್ನಾಟಕ ಇತಿಹಾಸ, ರಾಷ್ಟ್ರಕೂಟರು, ವಾಸ್ತುಶಿಲ್ಪ, ಶಿಲ್ಪಕಲೆ, ಮಕರ ತೋರಣ, ಮತ್ತವಾರಣ.

## ಪೀಠಿಕೆ

ಭಾರತೀಯ ವಾಸ್ತುಕಲೆ ಮತ್ತು ಶಿಲ್ಪಕಲೆಗಳಲ್ಲಿ ಮೊಸಳೆಯು ಸಾಂಪ್ರದಾಯಿಕವಾಗಿ ವಿಶಿಷ್ಟವಾದ ಮತ್ತು ಮಹತ್ವದ ಸ್ಥಾನ ಪಡೆದಿದೆ. ಸಾಂಕೇತಿಕವಾಗಿ ಬಳಸಲಾದ ಮಕರ ಶಿಲ್ಪವು ತನ್ನ ವಿಶಿಷ್ಟ ಅಂಗರಚನೆಯಿಂದ ಹೆಚ್ಚು ಜನಪ್ರಿಯತೆ ಹೊಂದಿದೆ. ಮಕರವು ಅಲಂಕಾರಿಕವಾಗಿ ಅನೇಕ ರೂಪ ವ್ಯತ್ಯಾಸಗಳೊಂದಿಗೆ ಕಂಡರಣೆಗೊಂಡಿದೆ. ಎರಡು ಸ್ತಂಭಗಳ ನಡುವೆ, ಅದರ ಮೇಲಿಂದ ಆರಂಭವಾಗಿ, ಕಮಾನಿನ ಆಕಾರದಲ್ಲಿ ಸೇರಿ ಚಾಚಿಕೊಂಡು ನಿಂತಿರುವ ರಚನೆಯೇ ತೋರಣವೆನಿಸುತ್ತದೆ.

ತೋರಣ ವಾಸ್ತುಶಿಲ್ಪದ ಬಗ್ಗೆ ಇತ್ತೀಚಿಗೆ ಅಧ್ಯಯನ ಮಾಡಿದವರೆಂದರೆ, ಪಾರುಲ್ ಪಾಂಡೆ, ಧಾರ್[1] ಅವರು ತೋರಣವು ಭಾರತೀಯ ವಾಸ್ತುಶಿಲ್ಪವು ಪ್ರಪಂಚಕ್ಕೆ ನೀಡಿರುವ ಪ್ರಮುಖ ಕೊಡುಗೆಯಾಗಿದೆ ಎಂದು ವಾದಿಸುತ್ತಾರೆ. ಕಾರಣ ತೋರಣವು ಯಾವುದೇ ವಿದೇಶಿ ಕಲೆಯಿಂದ ಪ್ರಭಾವಿತವಾಗಿರದೇ ಭಾರತದಲ್ಲಿಯೇ ಇದು ಬೆಳವಣಿಗೆಯನ್ನು ಕಂಡಿದೆ. ಗೌತಮ ವಜ್ರಾಚಾರ್ಯ[2] ಅವರು ಅಶೋಕನ

*Please cite this article as:* ಮಾರುತಿ, ಎಲ್. ಪಿ. (2025). ರಾಷ್ಟ್ರಕೂಟರ ಕಲೆಯಲ್ಲಿ ಮಕರ ತೋರಣ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(2). ಪು.ಸಂ.* 8–14

ಲೋಮಸ ರಿಷಿಯ ಗುಹೆಯ ಅರ್ಧಚಂದ್ರಾಕಾರದ ಬಾಗಿಲಿನ ಮೇಲೆ ತೋರಣವನ್ನು ಗುರುತಿಸುತ್ತಾರೆ. ತೋರಣಕ್ಕೆ ಸಂಸ್ಕೃತದಲ್ಲಿ ಮತ್ತವಾರಣ ಎನ್ನುವ ಇನ್ನೊಂದು ಹೆಸರಿದೆ.

ಪಿ.ಕೆ.ಆಚಾರ್ಯ ಅವರ ಪ್ರಕಾರ ಮಕರತೋರಣವೆಂದರೆ, *An Arched With Makara An Animal Like Shark Or Crocodile,* [3] ತೋರಣದಲ್ಲಿ ಅನೇಕ ವಿಧಗಳಿವೆ. ಅವುಗಳೆಂದರೆ ಮಕರತೋರಣ, ಪತ್ರತೋರಣ ಮತ್ತು ಚಿತ್ರತೋರಣ. [4] ಮಕರಗಳ ಬಾಯಿಂದ ಬಳ್ಳಿಯು ಕಮಾನಾಗಿ ಹೊರಹೊಮ್ಮಿದಂತೆ ಇರುವುದಕ್ಕೆ ಮಕರತೋರಣ ಎನ್ನುವರು. ಭೂತ, ವಿದ್ಯಾಧರ, ಯಕ್ಷ, ಹಂಸ, ವ್ಯಾಳ ಇತ್ಯಾದಿಗಳು ಮಕರದ ಬಾಯಿಂದ ಹೊರಟಂತೆ ಬಿಡಿಸಿದ್ದು ಮಿಶ್ರಾಲಾಂಕಾರವಿದ್ದರೆ ಅದಕ್ಕೆ ಚಿತ್ರತೋರಣವೆಂದೂ ಹೇಳಲಾಗಿದೆ. ತೋರಣ ಅರ್ಧಚಂದ್ರಕಾರದಲ್ಲಿದ್ದು ಅದರಲ್ಲಿ ಬಳ್ಳಿಸಾಲು ಎಲೆಗಳನ್ನು ಬಿಡಿಸಿದ್ದರೆ ಅದಕ್ಕೆ ಪತ್ರತೋರಣ ಎನ್ನುವರು. ಆದರೆ ಕರ್ನಾಟಕದ ಬಹುತೇಕ ದೇವಾಲಯಗಳಲ್ಲಿ ಮಕರತೋರಣವನ್ನೇ ಅಲಂಕಾರಿಕವಾಗಿ ಬಳಕೆಯಲ್ಲಿದೆ. ರಾಷ್ಟ್ರಕೂಟರ ದೇವಾಲಯಗಳು ಇದಕ್ಕೆ ಹೊರತಾಗಿಲ್ಲ.

ಮಕರವು ಜಲಚರ ಪ್ರಾಣಿಗಳ ರಾಜ. ಜಲವು ಜೀವವನ್ನು ಜೀವಶಕ್ತಿಯನ್ನು ನೀಡುವಂತಹದು. ಆದ್ದರಿಂದ ನೀರು ಜೀವನದ ಮೊದಲ ಆಧಾರ ತತ್ವವಾಗಿದೆ. ಈ ನೀರನ್ನು ಶುದ್ಧೀಕರಣಗೊಳಿಸುವುದರ ಮೂಲಕ ಜೀವ ಜಗತ್ತನ್ನು ಕಾಪಾಡುವ ಪ್ರಾಣಿ ಮಕರವಾಗಿದೆ. ಮಕರವು ನದಿ ದೇವತೆಯಾದ ಗಂಗೆ ಮತ್ತು ಮಳೆ ದೇವತೆಯಾದ ವರುಣನಿಗೆ ವಾಹನವಾಗಿದೆ. [5] ನೀರಿನ ಮೂಲಕ ಎಲ್ಲಾ ಜೀವಿಗಳು ಉಗಮವಾಗುತ್ತವೆ.

ಮಕರ ಮತ್ತು ಮೀನುಗಳು ನೀರನ್ನು ಶುದ್ಧೀಕರಿಸುತ್ತವೆ. ಈ ಕಾರಣದಿಂದ ಮಕರದ ಬಾಯಿಂದ ಗಿಡ, ಬಳ್ಳಿಗಳು, ಪ್ರಾಣಿಗಳು ಮತ್ತು ಮಾನವರು ಹೊರಬರುವಂತೆ ತೋರಿಸಿರುತ್ತಾರೆ. ಪರೋಕ್ಷವಾಗಿ ಸಕಲ ಸಿರಿ ಸಂಪತ್ತು ಹರಿದು ಬರುವುದು ಮಕರದಿಂದಲೇ ಎಂಬ ಕಲಾವಿದನ ವಿಚಾರ ದೇವಾಲಯದಲ್ಲಿ ವಿವಿಧ ಭಾಗಗಳಲ್ಲಿ ಮೂರ್ತರೂಪ ಪಡೆದಿರುತ್ತದೆ. ತೋರಣವು ಭಾರತೀಯ ವಾಸ್ತುಶಿಲ್ಪದ ಪ್ರಮುಖ ಅಂಗವಾಗಿದ್ದು ಇದು ಇಲ್ಲಿನ ಮೂಲ ಪರಿಕಲ್ಪನೆಯಾಗಿದೆ. ಬೇರೆ ಯಾವುದೇ ಪ್ರದೇಶದಿಂದ ಪ್ರಭಾವಿತವಾಗಿರುವುದಿಲ್ಲ.

ಭಾರತೀಯ ಶಿಲ್ಪ ಪರಂಪರೆಯಲ್ಲಿ ಮಕರವು ಮೊದಲ ಬಾರಿಗೆ ಗೋಚರಿಸುವುದು ಬುದ್ಧಗಯಾದಲ್ಲಿ. ಅಶೋಕನು ಕ್ರಿ.ಪೂ 250ರಲ್ಲಿ ನಿರ್ಮಿಸಿದ ಮಹಾಬೋಧಿಯ ಕಟಕಟೆ (ರೇಲಿಂಗ್ಸಯಲ್ಲಿ) ಕಂಡುಬರುತ್ತದೆ.[6] ಭಾರ್ಹುತ್ ಸ್ತೂಪದಲ್ಲಿ ಯಕ್ಷಿಯೊಂದರ ವಾಹನವಾಗಿ ಕಾಣಿಸಿಕೊಂಡಿದೆ. ಗಂಗೆಯ ವಾಹನವಾಗಿ ಮಕರವು ಗುಪ್ತರ ಶಿಲ್ಪಗಳಲ್ಲಿ ಪ್ರಕಟಣೆಗೊಂಡಿದೆ. ಜೈನಶಿಲ್ಪಕಲೆಯಲ್ಲಿ ಒಂಭತ್ತನೇಯ ತೀರ್ಥಂಕರನಾದ ಪುಷ್ಪದತ್ತನ ಲಾಂಛನವಾಗಿಯೂ ಮಕರ ಶಿಲ್ಪಿತವಾಗಿದೆ. ಮಾನಸಾರ ಶಿಲ್ಪಶಾಸ್ತ್ರ ಗ್ರಂಥವು ಜೈನ ತೀರ್ಥಂಕರನ್ನು ಮಕರ ತೋರಣಗಳಿಂದ ಸಿಂಗಾರಗೊಂಡ ಸಿಂಹಾಸನಗಳಲ್ಲಿ ಪ್ರತಿಷ್ಠಾಪಿಸುತ್ತಾರೆಂದು ತಿಳಿಸುತ್ತದೆ.

ದೇವಾಲಯ ವಾಸ್ತುಶಿಲ್ಪಕ್ಕೆ ಮುಂಚೆ ಬೌದ್ಧರ ಸ್ತೂಪಗಳಲ್ಲಿ ತೋರಣವು ಅತ್ಯಂತ ಜನಪ್ರಿಯವಾದ ಕಲೆಯ ಭಾಗವಾಗಿತ್ತು. ಸಾಂಚಿ ಸ್ತೂಪದ ತೋರಣವು ಅದರಲ್ಲಿ ಬಿಂಬಿತವಾದ ಶಿಲ್ಪಕಲೆಯ ಜೊತೆಗೆ ಸಮಕಾಲೀನ ಚಾರಿತ್ರಿಕ ಮಾಹಿತಿಗಳನ್ನು ತಿಳಿಸುವ ಆಕರಗಳಾಗಿವೆ. ಉದಾಹರಣೆಗೆ ತೋರಣಗಳಲ್ಲಿ ನಗರ ಜೀವನ, ವರ್ತಕರ ಗುಂಪು, ಬಹುಮಹಡಿ ಕಟ್ಟಡಗಳು, ಪ್ರಾಣಿ–ಪಕ್ಷಿಗಳ ಜೊತಗೆ ಇವುಗಳನ್ನು ರಚಿಸಿದ ಕಲೆಗಾರರ ಹೆಸರನ್ನು ಚಿತ್ರಿಸುತ್ತಿದ್ದರು. ಬಹುತೇಕ ಬೌದ್ಧ ತೋರಣಗಳು ಚಾರಿತ್ರಿಕ ಮತ್ತು ಸಮಕಾಲೀನ ಸಾಂಸ್ಕೃತಿಕ ಬದುಕನ್ನು ವಿವಿಧ ರೀತಿಯ ಶೈಲಿಯಲ್ಲಿ ಕೆತ್ತನೆ ಮಾಡಿದ್ದಾರೆ. ಆದರೆ ದೇವಾಲಯ ವಾಸ್ತುಶಿಲ್ಪದಲ್ಲಿ ಚಾರಿತ್ರಿಕ ಸನ್ನಿವೇಶಗಳಿಗಿಂತ ಪುರಾಣಿಕ ಮತ್ತು ಕಾಲ್ಪನಿಕ ದೃಶ್ಯಗಳಿಗೆ ಮಹತ್ವ ಕೊಡಲಾಯಿತು.

ಚಾಲುಕ್ಯರ ಶಿಲ್ಪಿಗಳು ಮಕರ ಶಿಲ್ಪಗಳನ್ನು ರಚಿಸುವಲ್ಲಿ ಹೆಚ್ಚಿನ ಒಲವು ತೋರಿದ್ದಾರೆ. ಮಕರದ ಉಲ್ಲೇಖವು ಭಾಗವಾತ ಪುರಾಣ, ಪಂಚತಂತ್ರ ಕತೆಯ ಭಾಗವಾಗಿದ್ದ ಮಕರದ ಚಿತ್ರಣ ನೈಜ ಸ್ವರೂಪದ್ದಾಗಿದೆ. ಸಾಂಪ್ರಾದಾಯಿಕ ಆನೆ, ಕುದುರೆ, ಬೇರೆ ಪ್ರಾಣಿಗಳಿಗಿಂತ ಮಕರದ ದೇಹ ರಚನೆ ಮತ್ತು ವಿಲಕ್ಷಣ ಆಕಾರವನ್ನು ಅತ್ಯಂತ ಕಲಾತ್ಮಕವಾಗಿ ಕಲಾವಿದರು ದೇವಾಲಯದ ಗರ್ಭಗೃಹ, ನವರಂಗ, ಸಭಾಮಂಟಪದ ದ್ವಾರಗಳ ಮೇಲೆ ಕೆತ್ತಿರುವುದು ಅತ್ಯಂತ ಕಷ್ಟದಾಯಕವಾಗಿರುತ್ತದೆ. ಅದರ ಬಾಲದ ರಚನೆಯ ಸುರುಳಿ ಆಕಾರವನ್ನು ಅತ್ಯಂತ ಸೌಂದರ್ಯಯುತವಾಗಿ ಶಿಲ್ಪಿ ನಾಜೂಕಿನಿಂದ ಕೆತ್ತುವ ಅವಶ್ಯಕತೆ ಇರುತ್ತದೆ. ಈ ಶಿಲ್ಪ ನಿರ್ಮಾಣದಲ್ಲಿ ಕಲೆಗಾರನ ತಾಳ್ಮೆ ಮತ್ತು ಅನುಭವ ಪ್ರಮುಖ ಪಾತ್ರ ವಹಿಸುತ್ತವೆ.

ಚಾಲುಕ್ಯರ ದೇವಾಲಯಗಳಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ಅಲಂಕಾರ ಶಿಲ್ಪವಾಗಿ ಮಕರವನ್ನು ಬಳಸಿರುವರು. ದೇವಾಲಯದ ಪರಿಭಾಷೆಯಲ್ಲಿ ವಿತಾನ ಎಂದರೆ ಛತ್ತಿನ ಭಾಗ. ಬಾದಾಮಿಯ ಪ್ರಸಿದ್ಧ ಮೊದಲನೇ ಶೈವ ಗುಹೆಯ ವಿತಾನದಲ್ಲಿ ಮತ್ತು ಐಹೊಳೆಯ ಮೀನ ಬಸದಿ, ಚಿಕ್ಕಿಗುಡಿಯ ವಿತಾನದಲ್ಲಿ ಮಕರವು ಸೂಕ್ಷ್ಮ ಕೆತ್ತನೆಗಳಿಂದ ಕೂಡಿ ಅತ್ಯಂತ ಮೋಹಕವಾಗಿದೆ. ನದೀ ದೇವತೆಗಳಾದ ಗಂಗೆಯ ವಾಹನವಾಗಿ ಮಕರವು ತಪ್ಪದೇ ಕಾಣಿಸಿಕೊಂಡಿದೆ. ಮಕರದ ಅಲಂಕಾರ ರಹಿತ ದೇಹವನ್ನು ಮಹಾವಿಷ್ಣುಗೃಹದ ಒಂದು ಪಂಚತಂತ್ರದ ಕಥೆಯ ಭಾಗವನ್ನು ಕೆತ್ತಿರುವುದು ಕಂಡುಬರುತ್ತದೆ.

ಚಾಲುಕ್ಯರ ಶಿಲ್ಪಿಗಳು ಹಲವಾರು ವಿಧದ ತೋರಣಗಳನ್ನು ಭಿತ್ತಿ, ದ್ವಾರಬಂಧ, ಮತ್ತು ಜಾಲಂಧ್ರಗಳ ಮೇಲೆ ಕಂಡು ಬರುವ ಕಮಾನುಗಳು. ಮುಖ್ಯವಾಗಿ ಮಕರಗಳನ್ನು ಹೊಂದಿದ ಕಮಾನವು ಮಕರತೋರಣವೆನಿಸುತ್ತದೆ. ಎರಡು ಮಕರಗಳ ದವಡೆಗಳಿಂದ ಹೊರ ಬರುತ್ತಿರುವ ಲತಾ ಬಳ್ಳಿಗಳನ್ನು ಅದು ಒಳಗೊಂಡಿರುತ್ತದೆ. ಸಾಮಾನ್ಯವಾಗಿ ಚಾಲುಕ್ಯರ ಕಲಾವಿದರು ಮೊದಮೊದಲು ರಚಿಸಿದ ಮಕರಗಳ ಬಾಲಗಳು ಕಿರಿದಾಗಿವೆ. ಎಂಟನೇ ಶತಮಾನದಲ್ಲಿ ಕೊರೆಯಲಾದ ಮಕರತೋರಣಗಳಲ್ಲಿ ಉದ್ದ ಬಾಲವಿರುವುದನ್ನು ಕಾಣುತ್ತೇವೆ. ಇದು ಚಾಲುಕ್ಯರ ಕಾಲದ ಶಿಲ್ಪದ ಬೆಳವಣಿಗೆಯನ್ನು ಸೂಚಿಸುತ್ತದೆ.

ಐಹೊಳೆ ಹುಚ್ಚಪ್ಪಯ್ಯ ಗುಡಿ ಮತ್ತು ಪಟ್ಟದಕಲ್ಲಿನ ವಿರೂಪಾಕ್ಷ ಗುಡಿಗಳು ಚಾಲುಕ್ಯರ ಕೊನೆಯ ಕಾಲದಲ್ಲಿ ರಚಿತವಾಗಿದ್ದು ಮಕರಗಳು ಉದ್ದವಾದ ಬಾಲವನ್ನು ಹೊಂದುವುದರ ಜೊತೆಗೆ ಶಿಲ್ಪಗಳಲ್ಲಿನ ಪ್ರಮುಖ ಬದಲಾವಣೆಯನ್ನು ಗಮನಿಸಬಹುದು. ಮಕರಾರೂಢನಾಗಿ ಒಬ್ಬ ಗಣನನ್ನು ಮಧ್ಯೆ ತೋರಿದ್ದಾನೆ.

ಶಿಲ್ಪಿಯ ಕೌಶಲ್ಯದ ಜೊತೆಗೆ ಕಲ್ಪನಾ ವಿಲಾಸವು ಮನೋಹರವಾಗಿ ಬಿಂಬಿತವಾಗಿದೆ. ಪ್ರಾರಂಭದಲ್ಲಿ ಸಾಮಂತರಾದ ರಾಷ್ಟ್ರಕೂಟರು ತಮ್ಮ ಕಲೆಯನ್ನು ಬಾದಾಮಿ ಪರಿಸರದಲ್ಲಿ ಮುಂದುವರಸಿದರು. ಉದಾಹರಣೆಗೆ ಪಟ್ಟದಕಲ್ಲಿನ ಜೈನ ಬಸದಿ ಮತ್ತು ವಿರೂಪಾಕ್ಷ ದೇವಾಲಯ ಸಂಕೀರ್ಣದಲ್ಲಿ ಎರಡು ಗುಡಿಗಳು ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಾಣವಾಗಿವೆ.

ಬಾದಾಮಿ ಚಾಲುಕ್ಯರ ಕಾಲದ ದೇವಾಲಯಗಳ ಹೊರಗೋಡೆಯನ್ನು ಅಲಂಕರಿಸಿದ್ದ ಕೋಷ್ಠಗಳು ರಾಷ್ಟ್ರಕೂಟರ ಕಾಲದ ದೇವಾಲಯಗಳಲ್ಲಿಯೂ ಮುಂದುವರೆಯುವುದರ ಜೊತೆಗೆ ಅವುಗಳ ಸಂಖ್ಯೆಯು ಹೆಚ್ಚಾಯಿತು. ಈ ಕೋಷ್ಠಗಳ ಶಿಖರ ಅಥವಾ ಮೇಲ್ಭಾಗವು ಶಿಖರ ಅಥವಾ ಮಕರ ತೋರಣಗಳಿಂದ ಕೂಡಿದೆ. ಈ ರೀತಿ ಸನ್ನಿವೇಶಗಳು ಗುಲಬರ್ಗಾ ಜಿಲ್ಲೆಯ ಮಂಗಲಗಿಯ ಮಲ್ಲಿಕಾರ್ಜುನ ಗುಡಿ, ಮಿರಿಯಾಣದ ಕುಂಬಾರಗುಡಿ, ಸುಲೇಪೇಟೆಯ ಈಶ್ವರ ಮತ್ತು ಶಂಕರ ಲಿಂಗ ಗುಡಿಗಳ ಹೊರಗೋಡೆಗಳಲ್ಲಿ ಸ್ಪಷ್ಟವಾಗಿ ಕಂಡುಬರುತ್ತವೆ. ರಾಷ್ಟ್ರಕೂಟರ ಕಟ್ಟಿದ ದೇವಾಲಯ ಎನ್ನಲು ಈ ಒಂದು ಮಕರತೋರಣದ ವಿಭಿನ್ನತೆ ಪ್ರಮುಖ ಅಂಶವಾಗಿದೆ.

ರಾಷ್ಟ್ರಕೂಟರ ಕಾಲಕ್ಕೆ ಅತ್ಯಂತ ಪ್ರಮುಖ ಬದಲಾವಣೆಯಲ್ಲಿ ಒಂದಾದ ಮಕರ ತೋರಣಗಳ ಪ್ರತ್ಯೇಕ ರಚನೆ ಮಾಡಿರುವುದು ಪ್ರಮುಖ ಅಂಶವಾಗಿದೆ. ಅರ್ಧಮಂಟಪದ ಎದುರುಗಡೆ ಎರಡು ಕಂಬಗಳನ್ನು ನಿರ್ಮಿಸಿ ಅದರ ಮೇಲೆ ಕಮಾನಿನಾಕರದಲ್ಲಿ ರಚನೆ ಮಾಡುವ ಮಕರ ತೋರಣವು ನಿರ್ಧಿಷ್ಟವಾಗಿ ರಾಷ್ಟ್ರಕೂಟರ ಕಲಾ ಲಕ್ಷಣವಾಗಿದೆ. ಗರ್ಭಗೃಹದ ಅಲಂಕರಣೆಗೂ ಮಕರ ತೋರಣವನ್ನು ಬಳಸಿದ್ದನ್ನು ಈ ಕಾಲದ ದೇವಾಲಯದಲ್ಲಿ ಕಾಣಬಹುದು. ದೇವಾಲಯದ ಮುಂಭಾಗದಲ್ಲಿ ಮಕರ ತೋರಣವನ್ನು ನಿಲ್ಲಿಸುವ ಸಂಪ್ರದಾಯ ರಾಷ್ಟ್ರಕೂಟರ ಕಾಲಕ್ಕೆ ಪ್ರಾರಂಭವಾಯಿತು.

ವಾಸ್ತು ಗ್ರಂಥವಾದ ಕಾಮಿಕಾಗಮವು ಮೂರು ರೀತಿಯ ತೋರಣಗಳನ್ನು ಹೆಸರಿಸುತ್ತದೆ. ಪತ್ರ, ಮಕರ ಮತ್ತು ಚಿತ್ರ. ದೇವ, ದ್ವಿಜ ಮತ್ತು ನರೇಂದ್ರರಿಗಾಗಿ ನಿರ್ಮಿಸಲ್ಪಡುವ ವಾಸ್ತು ರಚನೆಗಳಲ್ಲಿ ಮಾತ್ರ ಮಕರ ತೋರಣವನ್ನು ನಿರ್ಮಿಸಬೇಕೆನ್ನುತ್ತದೆ.[7] ಮಕರಗಳ ಬಾಯಿಂದ ರತ್ನಹಾರಗಳು, ಮುತ್ತಿನ ಮಾಲೆಗಳು ಹೊರಹೊಮ್ಮುತ್ತವೆ. ಬಾದಾಮಿ ಚಾಲುಕ್ಯರು ಅತ್ಯುತ್ತಮ ಮಕರ ತೋರಣಗಳನ್ನು ರಚಿಸಿದ್ದಾರೆ. ರಾಷ್ಟ್ರಕೂಟರು ಎಲ್ಲೋರಾದ ಕೈಲಾಸನಾಥ ದೇವಾಲಯದಲ್ಲಿ ಹೊರಭಿತ್ತಿಯ ಮೇಲೆ ಅದ್ಭುತವಾದ ಮಕರ ತೋರಣಗಳು ನಿರ್ಮಾಣಗೊಂಡಿವೆ. ಶಾಸ್ತ್ರಗ್ರಂಥಗಳು ಮಂಟಪಗಳ ನಾಲ್ಕು ದಿಕ್ಕಿನಲ್ಲಿ ದ್ವಾರಗಳ ಮೇಲೆ ಮಕರ ತೋರಣಗಳು ರಚಿಸಬೇಕೆಂದು ಹೇಳುತ್ತವೆ. ಈ ರೀತಿಯ ರಚನೆ, ಎಲ್ಲೋರಾದ ಕೈಲಾಸನಾಥ ದೇವಾಲಯದ ನಂದಿ ಮಂಟಪದಲ್ಲಿ ಕಂಡುಬರುತ್ತದೆ.[8]

ರಾಷ್ಟ್ರಕೂಟರ ಪ್ರಾರಂಭದ ದೇವಾಲಯಗಳು ಐಹೊಳೆಯಲ್ಲಿ ರಚನೆಯಾಗಿರುವುದು ಕಂಡುಬರುತ್ತವೆ. ಐಹೊಳೆಯ ಮಲ್ಲಿಕಾರ್ಜುನ ಗುಡಿಯ ಮುಂದೆ ಮಕರತೋರಣ ನಿಂತಿರುವುದು ಇದಕ್ಕೆ ನಿದರ್ಶನವಾಗಿದೆ. ಗಳಗನಾಥ ದೇವಾಲಯದ ಗುಂಪಿನಲ್ಲಿಯೂ ಇನ್ನೊಂದು ಮಕರ ತೋರಣವಿದೆ. ಮಕರ ತೋರಣವನ್ನು ಗರ್ಭಗುಡಿಯ ಮುಂದೆ ಎರಡು ಕಂಬಗಳ ಮೇಲೆ ಅಳವಡಿಸುವ ಸಂಪ್ರದಾಯ ರಾಷ್ಟ್ರಕೂಟರ

ಕಾಲದಿಂದಲೇ ಪ್ರಾರಂಭವಾಯಿತು.[9] ಸೊಗಲದ ಸೋಮೆಶ್ವರ ದೇವಾಲಯದ ಗರ್ಭಗುಡಿಯ ಮುಂಭಾಗದಲ್ಲಿ ಅರ್ಧಮಂಟಪದ ಕಂಬಗಳ ಮೇಲೆ ಮುಂದೆ ಇಂತಹ ಮಕರ ತೋರಣವಿದೆ.

ಗರ್ಭಗೃಹದ ಮುಂದೆ ಅರ್ಧಮಂಟಪದ ಕಂಬಗಳ ಮೇಲೆ ಗುಲಬರ್ಗಾ ಜಿಲ್ಲೆಯ ಮಿರಿಯಾಣದ ಈಶ್ವರ ಗುಡಿ, ಕುಂಬಾರ ಗುಡಿ, ಸುಲೆಪೇಟೆಯ ಶಂಕರಲಿಂಗ ಗುಡಿ, ನಿಡಗುಂದದ ಸೂರ್ಯನಾರಾಯಣ ಗುಡಿ, ಮಂಗಲಗಿಯ ಮಲ್ಲಿಕಾರ್ಜುನ ಗುಡಿಯ ಅರ್ಧಮಂಟಪದ ಪ್ರತ್ಯೇಕವಾದ ಕಂಬಗಳ ಮೇಲೆ ಮಕರ ತೋರಣಗಳು ರಚನೆಯಾಗಿವೆ.

ಮಿರಿಯಾಣದ ಮಕರ ತೋರಣಗಳು– ತೆಲಂಗಾಣ ರಾಜ್ಯಕ್ಕೆ ಗಡಿ ಹಂಚಿಕೊಂಡಿರುವ ಈ ಗ್ರಾಮವು ರಾಷ್ಟ್ರಕೂಟರ ಕಾಲಕ್ಕೆ ಪ್ರಮುಖ ಕಲಾ ಕೇಂದ್ರವಾಗಿತ್ತು. ಗ್ರಾಮವು ಪ್ರಾಕೃತಿಕವಾಗಿ ಸೌಂದರ್ಯವಾಗಿದ್ದು ಸುಮಾರು ಐದು ದೇವಾಲಯಗಳು ರಾಷ್ಟ್ರಕೂಟರ ಕಾಲಕ್ಕೆ ಸೇರಿದ್ದಾಗಿವೆ. ಗ್ರಾಮದ ಕೆರೆ, ಶಾಸನ ಶಿಲ್ಪ ಮತ್ತು ದೇವಾಲಯಗಳ ಸಂಕೀರ್ಣಗಳು ದೇವಾಲಯ ಸಂಸ್ಕೃತಿಯನ್ನು ಬಿಂಬಿಸುತ್ತವೆ.

ಮಿರಿಯಾಣದ ನಡು ಊರಲ್ಲಿ ಇರುವ ಮೂರು ಗುಡಿ ಆವರಣ ರಾಷ್ಟ್ರಕೂಟರ ಪ್ರಮುಖ ದೇವಾಲಯ ಸಂಕೀರ್ಣವಾಗಿದ್ದು ಅದರಲ್ಲಿರುವ ಈಶ್ವರ ಗುಡಿಯ ಗರ್ಭಗುಡಿಯ ಮುಂಭಾಗದ ಅರ್ಧಮಂಟಪದ ಮುಂದಿರುವ ಎರಡು ಕಂಬಗಳ ಮೇಲೆ ಮಕರ ತೋರಣವಿದೆ. ಮಕರ ತೋರಣದ ಶಿಲ್ಪಫಲಕದಲ್ಲಿ ಎಡದಿಂದ ಬಲಕ್ಕೆ, ಮೂರು ಶಿರಗಳುಳ್ಳ ಬ್ರಹ್ಮ, ಶಿವನು ಲಿಂಗದಿಂದ ಉದ್ಭವವಾಗುತ್ತಿರುವ ಶಿವನ ಮೂರ್ತಿ, ಶಿಲಾಫಲಕದ ನಡುವೆ ಚತುರ್ಭುಜ ನಟರಾಜ, ಬಲಭಾಗಕ್ಕೆ ವಿಷ್ಣುವಿನ ಉಬ್ಬುಪ್ರತಿಮೆಯಿದೆ. ಈ ಮಕರ ತೋರಣದ ತುದಿ ಭಾಗದಲ್ಲಿ ಮಕರಶಿಲ್ಪಗಳನ್ನು ಭಿನ್ನವಾಗಿ ಬಿಡಿಸಿರುವುದು ಗಮನಾರ್ಹವಾಗಿದೆ.

ಕುಂಬಾರಗುಡಿಯ ಮಕರತೋರಣ, ಮಿರಿಯಾಣದ ಈ ದೇವಾಲಯದಲ್ಲಿರುವ ಮಕರತೋರಣವು ಗುಲಬರ್ಗಾ ಜಿಲ್ಲೆಯ ರಾಷ್ಟ್ರಕೂಟರ ದೇವಾಲಯಗಳ ಮಕರತೋರಣಗಳಲ್ಲಿ ಅತ್ಯಂತ ಸೌಂದರ್ಯವಾಗಿದೆ. ಊರ ಹೊರಗಿನ ಈ ದೇವಾಲಯವು ನಿರ್ಲಕ್ಷಕ್ಕೇ ಒಳಗಾಗಿದ್ದು ದೇವಾಲಯದ ನವರಂಗ ಭಾಗವು ಸಂಪೂರ್ಣವಾಗಿ ಬಿದ್ದುಹೋಗಿದೆ. ಒಟ್ಟು ಆರು ಮಕರಗಳು ಒಂದು ದೊಡ್ಡ ತೋರಣವನ್ನೆ ನಿರ್ಮಿಸಿರುವ ಸನ್ನಿವೇಶ ಕಂಡುಬರುತ್ತದೆ. ಬಲ ಮತ್ತು ಎಡ ಭಾಗದ ಮಕರಗಳಿಗೆ ಆರೂಢರಿದ್ದಾರೆ. ಮಕರತೋರಣವು ಮೂರು ಫಲಕಗಳನ್ನು ಒಳಗೊಂಡಿದೆ. ಎಡಭಾಗದ ಫಲಕದಲ್ಲಿ ಶಿವ ಪಾರ್ವತಿಯರ ಮದುವೆ ಸನ್ನಿವೇಶ ಮನ ಮುಟ್ಟುವಂತೆ ಶಿಲ್ಪಿಯು ಚಿತ್ರಿಸಿದ್ದಾನೆ.

ಬ್ರಹ್ಮನ ಸನ್ನಿಧಿಯಲ್ಲಿ ನಡೆಯುತ್ತಿರುವ ಈ ಮದುವೆಗೆ ಶಿವನು ಹಿಂದೆ ಕೊಳಲು ಊದುವನು, ಮೂರು ಜನ ಸಂಗೀತಗಾರರು ವಾದ್ಯಗಳನ್ನು ನುಡಿಸುತ್ತಿದ್ದಾರೆ. ಮದುವೆ ಪ್ರಸಂಗವನ್ನು ಪಾರ್ವತಿಯ ಎಡಭಾಗದಲ್ಲಿ ಒಂದು ಗಣವು ಅಚ್ಚರಿಯಿಂದ ನೋಡುತ್ತಿದೆ. ತೋರಣದ ಮಧ್ಯಭಾಗದಲ್ಲಿ ಅಪಸ್ಮಾರನ ಮೇಲೆ ಕುಣಿಯುತ್ತಿರುವ ನಟರಾಜನ ಶಿಲ್ಪವಿದೆ. ಶಿಲ್ಪದ ಅಕ್ಕ–ಪಕ್ಕದಲ್ಲಿ ಶಿವಗಣರಿದ್ದಾರೆ. ತೋರಣದ ಬಲಭಾಗಕ್ಕೆ ಕೋಣದ ಮೇಲೆ ಸವಾರಿ ಮಾಡುತ್ತಿರುವ ಮಹಿಷಾಸುರ ಮರ್ಧಿನಿಯ ಶಿಲ್ಪವಿದೆ. ಶಿಲ್ಪಫಲಕದ ತೊಲೆಯ ತಳಭಾಗದಲ್ಲಿ ಜೋಡಿ ಕಮಲದ ಮೊಗ್ಗುಗಳನ್ನು ಮೂರು ಕಡೆ ಬಿಡಿಸುವ ಮೂಲಕ ಫಲಕದ ಸೌಂದರ್ಯ ಇಮ್ಮಡಿಸಿದೆ.

ನಿಡಗುಂದವು ರಾಷ್ಟ್ರಕೂಟರ ಪ್ರಮುಖ ಕಲಾ ಕೇಂದ್ರವಾಗಿದೆ. ಗ್ರಾಮದಲ್ಲಿ ಒಟ್ಟು ಮೂರು ರಾಷ್ಟ್ರಕೂಟರ ಕಾಲದ ದೇವಾಲಯಗಳನ್ನು ನಿರ್ಮಾಣವಾಗಿವೆ. ಇದರಲ್ಲಿ ಸೂರ್ಯನಾರಾಯಣ ಗುಡಿಯು ಶಾಸನೋಕ್ತ ಗುಡಿಯಾಗಿದ್ದು ಐತಿಹಾಸಿಕವಾಗಿ ಮಹತ್ವದ್ದಾಗಿದೆ. ಮೂರನೇ ಕೃಷ್ಣನ ಕ್ರಿ.ಶ, 939ರ ಶಾಸನ ದೊರೆತಿದೆ.[10] ಈ ದೇವಾಲಯ ಸಂಕೀರ್ಣದಲ್ಲಿ ಸೂರ್ಯನಾರಾಯಣ ಗುಡಿಯ ಅರ್ಧಮಂಟಪದಲ್ಲಿ ಎರಡು ದುಂಡಾಕಾರದ ಕಂಬಗಳ ಮೇಲೆ ಸುಂದರ ಮಕರತೋರಣವಿದೆ. ಈ ತೋರಣವನ್ನು ಅತ್ಯಂತ ಸೂಕ್ಷ್ಮವಾಗಿ ನಿರ್ಮಿಸಲಾಗಿದೆ.

ತೋರಣದ ಎರಡು ಕಡೆ ಕುಳಿತ ನಿಧಿಗಳಿವೆ. ಮಕರದ ಬಾಯಿಯಿಂದ ಹೊರಹೊಮ್ಮುತ್ತಿರುವ ಮಾನವರು, ಗಣರು ಮಕರದ ಬಾಯಿ ಕೆಳಗೆ ನೋಡಿದರೆ ಮಕರದ ಹಾಗೇ ಮೇಲೆ ನೋಡಿದರೆ ಮಯೂರದ ಹಾಗೇ ಕಾಣುವ ಅದ್ಭುತ ಕಲಾಕೃತಿಯನ್ನು ಶಿಲ್ಪಿ ಚಿತ್ರಿಸಿದ್ದಾನೆ. ಎರಡು ಕಡೆಯ ಮಕರಗಳಿಗೆ ಆರೂಢರಿದ್ದಾರೆ. ಮಕರ ಸವಾರರ ಮಧ್ಯ ಶಿಲ್ಪಿಯು ಸೂರ್ಯನ ಚಿತ್ರ ಮನಮೋಹಕವಾಗಿ ಚಿತ್ರಿಸಿದ್ದಾನೆ. ಇದರಿಂದ ದೇವಾಲಯವು ನಿರ್ಧಿಷ್ಟವಾಗಿ ಸೂರ್ಯ ಪಂಥಕ್ಕೆ ಸೇರಿದೆ ಎನ್ನಲು ಇದೇ ಪ್ರಮುಖ ಆಧಾರವಾಗಿದೆ. ಮಕರ ತೋರಣದ ಫಲಕದ ಮೇಲೆ ಹಲವರು ಸಂಗೀತಗಾರರು, ವಾದ್ಯಗಾರರು ವಿವಿಧ ಭಂಗಿಯಲ್ಲಿ ನಿರ್ಮಿಸಿರುವುದು ಶಿಲ್ಪದ ಸೌಂದರ್ಯ ಹೆಚ್ಚಿಸಿದೆ.

ಸುಲೇಪೇಟೆಯ ಮಕರತೋರಣ, ಚಿಂಚೋಳಿ ತಾಲೂಕಿನ ಈ ಗ್ರಾಮದಲ್ಲಿ ರಾಷ್ಟ್ರಕೂಟರ ಈಶ್ವರ ಮತ್ತು ಶಂಕರಲಿಂಗ ಗುಡಿಗಳು ಮತ್ತು  ಒಂದು ಬಸದಿ ಇದೆ. ಈಶ್ವರ, ಶಂಕರಲಿಂಗ ದೇವಾಲಯಗಳ ಸ್ಥಿತಿ ಕನಿಷ್ಟವಾಗಿದೆ. ಇದರಲ್ಲಿ ಶಂಕರಲಿಂಗ ಗುಡಿಯಲ್ಲಿ ಮಕರ ತೋರಣವಿದೆ. ಅರ್ಧಮಂಟಪದ ಪ್ರವೇಶದಲ್ಲಿ ಎರಡು ಕಂಬಗಳ ಮೇಲೆ ಮಕರ ತೋರಣ ಶಿಲ್ಪಫಲಕವಿದ್ದು, ಸೂಕ್ಷ್ಮ ಕೆತ್ತನೆಗಳಿಂದ ಕೂಡಿದೆ. ಮಿರಿಯಾಣದ ಕುಂಬಾರ ಗುಡಿಯ ಮಕರ ತೋರಣದ ಪ್ರತಿರೂಪದಂತಿದೆ. ಆರು ಮಕರಗಳು, ಅದರಲ್ಲಿ ಎಡ ಬಲ ಮಕರಗಳಿಗೆ ಮಾತ್ರ ಆರೂಢರು, ಎಡಭಾಗದಲ್ಲಿ ಬ್ರಹ್ಮನ ಮುಂದೆ ಶಿವ–ಪಾರ್ವತಿಯರ ಮದುವೆ ಪ್ರಸಂಗ, ಮಧ್ಯದ ಫಲಕದಲ್ಲಿ ನಾಟ್ಯವಾಡುತ್ತಿರುವ ನಟರಾಜ ಶಿಲ್ಪ, ಬಲಭಾಗದ ಶಿಲ್ಪದಲ್ಲಿ ಮಹಿಷ ಮರ್ಧಿನಿಯ ಶಿಲ್ಪವಿದೆ. ಶಿಲ್ಪಫಲಕದ ತೊಲೆಯ ತಳಭಾಗದಲ್ಲಿ ಜೋಡಿ ಕಮಲದ ಮೊಗ್ಗುಗಳನ್ನು ಮೂರು ಕಡೆ ಬಿಡಿಸುವ ಮೂಲಕ ಫಲಕದ ಸೌಂದರ್ಯ ಇಮ್ಮಡಿಸಿದೆ. ಉಡಗಿಯ ಲೋಕೇಶ್ವರ ದೇವಾಲಯದಲ್ಲಿ ಗರ್ಭಗೃಹ ದ್ವಾರದ ಮಕರ ತೋರಣ ರಚನೆಯಾಗಿರುವುದು ಪ್ರಮುಖವಾಗಿದೆ.

ಮಕರ ತೋರಣ ಕಲಾ ಕೌಶಲ್ಯದಲ್ಲಿ ಪ್ರಾಚೀನ ರಾಷ್ಟ್ರಕೂಟರ ಕಲಾವಿದರು ವಿವಿಧ ರೀತಿಯ ಹಲವು ಶಿಲ್ಪಗಳನ್ನು ಮನಮುಟ್ಟುವಂತೆ ಚಿತ್ರಿಸಿಲಾಗಿದೆ. ಗರ್ಭಗೃಹ ದ್ವಾರ, ಅರ್ಧಮಂಟಪದ ಎರಡು ಕಡೆ ಕಂಬಗಳನ್ನು ನಿಲ್ಲಿಸಿ ಮಕರ ತೋರಣಗಳ ರಚನೆ ಪ್ರಮುಖವಾಗಿದೆ. ಮಕರ ತೋರಣದಲ್ಲಿ ಬಿಡಿಸಿರುವ ಚಿಕಣಿ ಪ್ರಮಾಣದ ಶಿಲ್ಪಗಳ ಅಧ್ಯಯನಗಳು ನಡೆಯಬೇಕಾಗಿದೆ. ಅಲಕ್ಷಿತ ಕಲಾ ಪ್ರದೇಶವಾದ ಗುಲಬರ್ಗಾ ಜಿಲ್ಲೆಯಲ್ಲಿ ರಾಷ್ಟ್ರಕೂಟರ, ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಆದ ಬದಲಾವಣೆ ಮತ್ತು ಇನ್ನಿತರ ಪ್ರದೇಶಗಳ ಮಕರ ತೋರಣಗಳ ತುಲನಾತ್ಮಕ ಅಧ್ಯಯನದಿಂದ ಕರ್ನಾಟಕ ಕಲಾ ಚರಿತ್ರೆಯಲ್ಲಿ ಅದರಲ್ಲಿಯೂ ದೇವಾಲಯಗಳ ಅಲಂಕಾರ ಶಿಲ್ಪಗಳಲ್ಲಿ ಮಕರ ತೋರಣಗಳ ಪಾತ್ರವನ್ನು ತಿಳಿಯಬಹುದಾಗಿದೆ.

**ಕೊನೆ ಟಿಪ್ಪಣಿಗಳು**

---

[1] Parul Pandya Dhar. (2010).*The Torana In Indian Architecture.*

[2] Goutam Vajracharya , *Mattavarana, Understanding The Significance of The Torana In South Asian Art*, Jnana Pravaha. p.46.

[3] Acharya, P.K. (2004). *Ecncyclopedia Of Hindu Architecture*, p.419.

[4] ಅಪರ್ಣಕೂ.ಸ. (2021). *ದೇವಾಲಯ ವಾಸ್ತುಶಿಲ್ಪ ಪರಿಚಯ*. ಕನ್ನಡ ವಿಶ್ವವಿದ್ಯಾಲಯ ಹಂಪಿ. ಪು.173.

[5] ಶೀಲಾಕಾಂತ ಪತ್ತಾರ. (2013). *ಬಾದಾಮಿ ಚಾಲುಕ್ಯರ ದೇವಾಲಯಗಳ ಅಲಂಕಾರ ಶಿಲ್ಪಗಳು*. ಪು.119.

[6] ಅದೇ.119

[7] ಅನುರಾಧ, ವಿ. *ಕರ್ನಾಟಕದ ದೇವಾಲಯಗಳಲ್ಲಿ ಮಕರ ತೋರಣಗಳು*, ಇತಿಹಾಸ ದರ್ಶನ, ಸಂ–26, ಪು.76.

[8] ಅದೇ. 76

[9] ರಾಜಶೇಖರ, ಎಸ್. (1988). *ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ.* ಪು.79

[10] ಗಂಗಾನಾಯಕ್.ಕೆ. (2011). *ರಾಷ್ಟ್ರಕೂಟರ ಶಾಸನ ಸಂಪುಟ*–2. ಪು.500.